## Member's Representations.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ನಾನು ಹಿಂದೆ ಶ್ರೀಮಾನ್ ವಿ. ಎಸ್. ಪಾಟೀಲ್ ಅವರ ನಿರ್ಣಯದ ಮೇಲೆ ಮಾತನಾಡುತ್ತಿದ್ದೆನೆಂದು ನನ್ನ ನೆನಪು. ಅದರ ಬಗ್ಗೆ ಇನ್ನೂ ಕಾರಾವಕಾಶವನ್ನು ಗೊತ್ತುಮಾಡಿಲ್ಲ. ಆದ್ದರಿಂದ ಇವತ್ತು ಇದಕ್ಕೆ ಎಷ್ಟು ಕಾಲವನ್ನು ಅವಕಾಶ ಮಾಡಿಕೊಡುತ್ತೀರಿ?

ಅಧ್ಯಕ್ಷರು.—ಆ ವಿಷಯದ ಬಗ್ಗೆ ವಿಚಾರಮಾಡಿ ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಇದಕ್ಕೆ 3 ಘಂಟೆಗಳ ಕಾರಾವಕಾಶಕೊಟ್ಟಿತ್ತು. ಆದರೂ ಚರ್ಚೆ ಮುಗಿದಿರಲಿಲ್ಲ. ಇನ್ನು ಇದಕ್ಕೆ ಹೆಚ್ಚು ಕಾಲ ಕೊಡುವುದು ಅಗತ್ಯವಿಲ್ಲವೆಂದು ತಾವು ಹಿಂದೆ ಹೇಳಿದ್ದಿರಿ. ಇದು ಬಹಳ ಮುಖ್ಯವಾದ ನಿರ್ಣಯ. ಹಿಂದೆ ಈ ಚರ್ಚೆ ನಡೆವಾಗ ಶ್ರೀಮಾನ್ ಮುಕ್ಕಣ್ಣಪ್ಪನವರು ಕೊನೆಯಲ್ಲಿ ಮಾತನಾಡುತ್ತಿದ್ದರು. ಇನ್ನೂ ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ. ಅವರೆಲ್ಲರಿಗೂ ಅವಕಾಶಕೊಡಬೇಕು. ನಮ್ಮಲ್ಲಿ ಕೆಲವರು ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಆ ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರ ಭಾಷಣ ಮುಗಿದನಂತರ ಆಲೋಚನೆ ಮಾಡೋಣ. I mentioned yesterday that Sri V. S. Patil's Resolution will be taken up, but according to the Agenda it comes second. Now, item No. 6.

---

## PRIVATE MEMBER'S BILL

## MYSORE UNIVERSITY (AMENDMENT) BILL, 1965.

Sri GANJI VEERAPPA (Harihar).—Sir, I beg leave to introduce the Mysore University (Amendment) Bill, 1965.

Mr. SPEAKER.—The question is:

"That leave be granted for the introduction of the Mysore University (Amendment) Bill, 1965."

*The motion was adopted.*

Sri GANJI VEERAPPA.—Sir, I introduce the Bill.

Mr. SPEAKER.—The Bill is introduced.

---

## Member's Representation.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ವೆಟರಿನರಿ ಕಾಲೇಜ್ ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ನಾನು ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರದ ಗಮನವನ್ನು ಸೆಳೆಯುವ ಒಂದು ಸೂಚನೆಯನ್ನು ಕಳುಹಿಸಿದ್ದೆ.

Mr. SPEAKER.—Why did not the Hon'ble Member come and meet me? I persuade Members to come and meet me and I will tempt them with a cup of coffee. (*laughter*) Let him come and meet me at 10 O'clock. Now Sri C. J. Muchannappa will continue his speech. He has already taken 20 minutes and he may take another ten minutes and conclude.